# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 563
ಸದಸ್ಯರ ಹೆಸರು : ಶ್ರೀ ಬಸನಗೌಡ ಬಾದರ್ಲಿ (ವಿಧಾನ ಸಭಾ ಕ್ಷೇತ್ರ)
ಉತ್ತರಿಸಬೇಕಾಗಿದ ದಿನಾಂಕ : 11.03.2025
ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸಿಂಧನೂರಿನಲ್ಲಿ ಒಳಚರಂಡಿ ಕಾಮಗಾರಿಯಲ್ಲಿ ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | - ಇಲ್ಲ - |
| ಆ) | ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಉದ್ಭವಿಸುವುದಿಲ್ಲ. |
| ಇ) | ಸಿಂಧನೂರು ಒಳಚರಂಡಿ ಅವ್ಯವಸ್ಥೆಯ ಸುಧಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಸಿಂಧನೂರು ಒಳಚರಂಡಿ ಅವ್ಯವಸ್ಥೆಯ ಕುರಿತು ಕೆಲವು ದೂರುಗಳಿದ್ದು, ಅವುಗಳನ್ನು ಪರಿಹರಿಸಲು ಈ ಕೆಳಕಂಡಂತೆ ಕ್ರಮ ವಹಿಸಲಾಗಿದೆ;<br>• ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕೆ ಕಾರ್ಯಕ್ರಮ (ಎನ್.ಕೆ.ಯು.ಎಸ್.ಐ.ಪಿ) ದಡಿ ಸಿಂಧನೂರು ನಗರ ಒಳಚರಂಡಿ ಯೋಜನೆಯಡಿ ಸಿಂಧನೂರು ನಗರದಲ್ಲಿ 115.00 ಕಿ.ಮೀ. ಒಳಚರಂಡಿ ಜಾಲ, 4214 ಸಂಖ್ಯೆ Machine hole, 3 ಸಂಖ್ಯೆ ಮತ್ತು ವೆಟ್‌ವೆಲ್, 12 ಎಂ.ಎಲ್.ಡಿ ಎಫ್.ಎ.ಎಲ್. ಮಾದರಿಯ ಜಲ ತ್ಯಾಜ್ಯ ಸಂಸ್ಕರಣ ಘಟಕ ನಿರ್ಮಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ.<br>• ಎನ್.ಕೆ.ಯು.ಎಸ್.ಐ.ಪಿ. ಯೋಜನೆಯಡಿ ಕೈಗೊಂಡಿರುವ ಒಳಚರಂಡಿ ಕಾಮಗಾರಿಯಲ್ಲಿ ಮನೆ ಸಂಪರ್ಕಗಳನ್ನು ನೀಡಲು ಅವಕಾಶವಿಲ್ಲದಿದ್ದ ಕಾರಣ ಸ್ಥಳೀಯ ಸಂಸ್ಥೆ ವತಿಯಿಂದ ಮನೆ ಸಂಪರ್ಕ ನೀಡಬೇಕಾಗಿತ್ತು. ಆದರೆ, ಮನೆ ಸಂಪರ್ಕಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯಗತ ಆಗದ ಕಾರಣ ತ್ಯಾಜ್ಯ ನೀರು ಸಂಸ್ಕರಣ ಘಟಕಕ್ಕೆ ಹರಿಯುತ್ತಿರುವುದಿಲ್ಲ. ಆದ್ದರಿಂದ ಮನೆ ಸಂಪರ್ಕ ನೀಡಲು ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪರಿಹಾರ ನಿಧಿ (ಯು.ಡಬ್ಲ್ಯೂ.ಎಂ) ಯೋಜನೆಯಡಿ ಕ್ರಮಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ.<br>• ಈ ನಡುವೆ, ಇತರೆ ಇಲಾಖೆಗಳಾದ ಲೋಕೋಪಯೋಗಿ ಇಲಾಖೆ, ಕೆ.ಆರ್.ಐ.ಡಿ.ಎಲ್. ಮತ್ತು ನಗರಸಭೆ ವತಿಯಿಂದ ರಸ್ತೆ ಅಭಿವೃದ್ಧಿ ಪಡಿಸುವಾಗ ರಸ್ತೆ ಕಾಮಗಾರಿಗಳ ಗುತ್ತಿಗೆದಾರರು Machine hole ಗಳಿಗೆ ಹಾನಿಮಾಡಿ ರಸ್ತೆ ನಿರ್ಮಾಣ ಸಾಮಾಗ್ರಿಗಳನ್ನು Machine hole ಒಳಗೆ ತುಂಬಿರುತ್ತಾರೆ. ಇದರಿಂದಾಗಿ ಕೊಳಚೆ ನೀರು |

| | | |
|---|---|---|
| | | ಸರಾಗವಾಗಿ ಹರಿಯುತ್ತಿರುವುದಿಲ್ಲ. ಇದರ ಪರಿಹಾರಕ್ಕಾಗಿ, ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>i) Machine hole ನಲ್ಲಿ ತುಂಬಿರುವ ಅನುಪಯುಕ್ತ ನಿರ್ಮಾಣ ಸಾಮಾಗ್ರಿಗಳ ತೆರವು ಕಾರ್ಯ.<br>ii) ಹಾನಿಗೊಳಗಾದ Machine hole ಗಳನ್ನು ಸರಿಪಡಿಸುವುದು.<br>iii) ರಸ್ತೆ ಮಟ್ಟಕ್ಕಿಂತ ಕಡಿಮೆ ಇರುವ Machine hole ಗಳನ್ನು ರಸ್ತೆ ಮಟ್ಟಕ್ಕೆ ಎತ್ತರಿಸುವುದು.<br>iv) ಒಳಚರಂಡಿ ಜಾಲದಲ್ಲಿ ಬಾಕಿ ಇರುವ ನೀರಿನ ಹರಿವು ಪರೀಕ್ಷಣೆ ಮಾಡುವುದು.<br><br>ಮೇಲಿನ ಪರಿಹಾರ ಕಾರ್ಯಗಳನ್ನು ಏಪ್ರಿಲ್-2025ರ ಅಂತ್ಯಕ್ಕೆ ಪೂರ್ಣಗೊಳಿಸಲು ಗುರಿ ಹೊಂದಲಾಗಿದೆ.<br><br>ಮುಂದುವರೆದಂತೆ, ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪರಿಹಾರ ನಿಧಿ (ಯು.ಡಬ್ಲ್ಯೂ.ಎಂ) ಯೋಜನೆಯಡಿ ವಿವಿಧ ವ್ಯಾಸಗಳ ಒಳಚರಂಡಿ ಕೊಳವೆ ಮಾರ್ಗದ ಉದ್ದ ಸುಮಾರು 7.0 ಕಿಮೀ ಹಾಗೂ 11520 ಮನೆಗಳಿಗೆ ಒಳಚರಂಡಿ ಸಂಪರ್ಕಗಳನ್ನು ನೀಡಲು ರೂ.20.00 ಕೋಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸದರಿ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿದೆ. |

ಕಡತ ಸಂಖ್ಯೆ:ನಅಇ 57 ಪಿಆರ್‌ಜೆ 2025

**(ಬಿ. ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು